## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.1037/2018**

ಪಿರ್ಯಾದಿ : ಸರ್ಕಾರ ಕುಟ್ಟ ಪೋಲೀಸ್.

ವಿರುದ್ಧ

ಆರೋಪಿ : 2. ಆಸೀಸ್ ಟಿ.ಎಮ್,

**ದೋಷಾರೋಪಣೆ**

ಶ್ರೀ. ಗಿರಿಗೌಡ ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿಯಾದ ನಾನು ಆರೋಪಿಗಳಾದಃ

2. ಆಸೀಸ್ ಟಿ.ಎಮ್,
ತಂದೆಃ ಟಿ.ಮೊಹಮ್ಮದ್,
ಪ್ರಾಯಃ 39 ವರ್ಷ,
ವಾಸಃ ಅರಂಪರದ ತಿರುನೆಲ್ಲಿ ಪಂಚಾಯತ್,
ತೋಲ್ಪಟ್ಟಿ ವೈನಾಡು,
ಕೇರಳ.

ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆಃ

ದಿನಾಂಕ 29.05.2017 ರಂದು ಸಮಯ ರಾತ್ರಿ 11.00 ಗಂಟೆಗೆ ಕುಟ್ಟ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕುಟ್ಟ ಹಳೆಯ ಚೆಕ್ ಪೋಸ್ಟ್ ಹತ್ತಿರ 2 ನೇ ಆರೋಪಿಯಾದ ನೀವು 1 ನೇ ಆರೋಪಿಯಾಡನೆ ಸೇರಿಕೊಂಡು ಸಮಾನೋದ್ದೇಶದಿಂದ ಒಂದೂಗೂಡಿ ಸಾಕ್ಷಿ 1 ಸಂಶೀರ್ , ಸಾಕ್ಷಿ 2 ಎ.ಆರ್.ಮುರಳೀಧರನ್, ಸಾಕ್ಷಿ 3 ಶಾಜೇದ್ ಮತ್ತು ಸಾಕ್ಷಿ 4 ಅಬ್ದುಲ್ ರಷೀದ್‌ರವರ ದಾರಿಯನ್ನು ತಡೆದು ನಿಲ್ಲಿಸಿ ಪ್ರತಿಬಂಧಿಸಿದ್ದು, ಭಾ.ದ.ಸಂ.ಕಲಂ 341 ಜೊತೆಗೆ 34 ರಡಿಯಲ್ಲಿ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ 2 ನೇ ಆರೋಪಿಯಾದ ನೀವು 1 ನೇ ಆರೋಪಿಯಾಡನೆ ಸೇರಿಕೊಂಡು ಸಮಾನೋದ್ದೇಶದಿಂದ ಒಂದೂಗೂಡಿ ಸಾಕ್ಷಿ 2 ರವರ ಮುಖದ ಭಾಗಕ್ಕೆ ಕೈಯಿಂದ ಹಲ್ಲೆ ಮಾಡಿ ನೋವುಂಟು ಮಾಡಿರುವ ಮೂಲಕ ಭಾ.ದ.ಸಂ.ಕಲಂ 353 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ 2 ನೇ ಆರೋಪಿಯಾದ ನೀವು1 ನೇ ಆರೋಪಿಯಾಡನೆ ಸೇರಿಕೊಂಡು ಸಮಾನೋದ್ದೇಶದಿಂದ ಒಂದೂಗೂಡಿ ನಿಮ್ಮ ಪೈಕಿ 2 ನೇ ಆರೋಪಿಯಾದ ನೀವು ಸಾಕ್ಷಿ 1 ರವರಿಗೆ ಮಾರಕಾಯುಧವಾದ ವೀಲ್ ಸ್ಪಾನರ್‌ನಿಂದ

Scanned with CamScanner

ತಲೆಯ ಭಾಗಕ್ಕೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವ ಮೂಲಕ ಭಾ.ದ.ಸಂ.ಕಲಂ 324 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನ, ಸ್ಥಳ, ಸಮಯ ಮತ್ತು ಸಂದರ್ಭಗಳಲ್ಲಿ 2 ನೇ ಆರೋಪಿಯಾದ ನೀವು1 ನೇ ಆರೋಪಿಯಾಡನೆ ಸೇರಿಕೊಂಡು ಸಮಾನೋದ್ದೇಶದಿಂದ ಒಂದೂಗೂಡಿ ಸಾಕ್ಷಿ 1 ರಿಂದ 4 ರವರಿಗೆ ಕೊಲೆ ಬೆದರಿಕೆ ಹಾಕಿರುವ ಮೂಲಕ ಭಾ.ದ.ಸಂ.ಕಲಂ 506 ಜೊತೆಗೆ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲ್ಕಂಡ ದೋಷಾರೋಪಣೆಯು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟೆ.

**ದಿನಾಂಕ:07.02.2022.**
**ಸ್ಥಳ: ಪೊನ್ನಂಪೇಟೆ.**

Scanned with CamScanner